
UASB LIBRARY
Newspaper Clippings
Pg .1 Tuesday 22-06-2021 Jai Kisan



ಕೃಷಿ ಡಿಪ್ಲೋಮಾ, ಪದವಿ ಕೋರ್ಸ್‌ಗೆ ಅನ್ವಯ


ರೈತರ ಮಕ್ಕಳಿಗೆ ಶೇ.50 ಸೀಟು

ಬೆಂಗಳೂರು: ಕೃಷಿ ಪದವಿ ಪಡೆಯುವ ರೈತರ ಮಕ್ಕಳಿಗೆ ಮೀಸಲಾತಿ ಹೆಚ್ಚಳ, 200 ಕೋಟಿ ರೂ. ವೆಚ್ಚದಲ್ಲಿ 100 ಪೊಲೀಸ್ ಠಾಣೆಗಳ ಸ್ಥಾಪನೆ, ವಿದ್ಯಾರ್ಥಿಗಳ ಸಮವಸ್ತ್ರ ವಿತರಣೆಗೆ 172 ಕೋಟಿ ರೂ.ಗೆ ಅನುಮೋದನೆ.

ಮುಖ್ಯಮಂತ್ರಿ ಯಡಿಯೂರಪ್ಪ ನೇತೃತ್ವದಲ್ಲಿ ಸೋಮವಾರ ನಡೆದ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಕೈಗೊಂಡ ಪ್ರಮುಖ ನಿರ್ಣಯಗಳಿವು. ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ವಿವರಣೆ ನೀಡಿದ ಗೃಹ ಸಚಿವ ಬಸವರಾಜ ಬೊಮ್ಮಾಯಿ, ಡಿಪ್ಲೋಮಾ ಇನ್ ಅಗ್ರಿಕಲ್ಚರ್ ಹಾಗೂ ಬಿಎಸ್‌ಸಿ ಇನ್ ಅಗ್ರಿಕಲ್ಚರ್ ಮತ್ತು ಸರಿಸಮಾನ ಕೃಷಿ ಪದವಿ ವ್ಯಾಸಂಗ ಮಾಡಲಿಚ್ಛಿಸುವ ರೈತರ ಮಕ್ಕಳಿಗೆ ಶೇ.40 ರಷ್ಟು ಮೀಸಲಾತಿ ನೀಡುತ್ತಿದ್ದನ್ನು ಶೇ.10 ರಷ್ಟು ಏರಿಕೆ ಮಾಡಿ ಒಟ್ಟಾರೆ ಶೇ.50ರಷ್ಟು ಮೀಸಲಾತಿ ಸಿಗಲಿದೆ ಎಂದರು.

ಸಾರ್ವಜನಿಕ ಬೇಡಿಕೆ ಮೇರೆಗೆ ರಾಜ್ಯದ ವಿವಿಧೆಡೆ 100 ಪೊಲೀಸ್ ಠಾಣೆಗಳನ್ನು ಸ್ಥಾಪಿಸಲಾಗುತ್ತದೆ. ಇದಕ್ಕಾಗಿ 200 ಕೋಟಿ ರೂಪಾಯಿ ವೆಚ್ಚವಾಗುವ ಅಂದಾಜಿದೆ ಎಂದು ಹೇಳಿದರು. ೨

ಸಂಪುಟ ಸಭೆ ಒಪ್ಪಿಗೆ



90 ದಿನದಲ್ಲಿ ಟಿಡಿಆರ್

ಸರ್ಕಾರಿ ಕಾಮಗಾರಿಗಳಿಗೆ ವಶಪಡಿಸಿಕೊಂಡ ಸ್ವತ್ತಿಗೆ ಪರಿಹಾರವಾಗಿ ನೀಡುವ ಅಭಿವೃದ್ಧಿ ಹಕ್ಕು ವರ್ಗಾವಣೆಗೆ (ಟಿಡಿಆರ್) ಕಾಮಗಾರಿ ಕೈಗೆತ್ತಿಕೊಳ್ಳುವ ಸಂಸ್ಥೆಯ ಸರ್ವೇ ವರದಿಯನ್ನೇ ಅಂತಿಮವಾಗಿ ಪರಿಗಣಿಸಿ 90 ದಿನದಲ್ಲಿ ಟಿಡಿಆರ್ ಅನುಮೋದಿಸಬೇಕು. ಇಲ್ಲದಿದ್ದರೆ, ಟಿಡಿಆರ್‌ಗೆ ಒಪ್ಪಿಗೆ ಸಿಕ್ಕಿದೆ ಎಂದು ಭಾವಿಸಬಹುದು. ಪ್ರತ್ಯೇಕವಾಗಿ ಯೋಜನಾ ಪ್ರಾಧಿಕಾರದ ಅನುಮತಿ ಪಡೆವ ಅಗತ್ಯವಿಲ್ಲ. ಇದಕ್ಕಾಗಿ ಕರ್ನಾಟಕ ನಗರ ಮತ್ತು ಪೌರಾಡಳಿತ ಯೋಜನಾ

22-06-2021
Hd Pg 01

ಕೃಷಿ ಕೋರ್ಸ್: ರೈತರು, ಕೃಷಿ ಕಾರ್ಮಿಕರ ಮಕ್ಕಳಿಗೆ ಶೇ.50ರಷ್ಟು ಮೀಸಲು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕೃಷಿ ಡಿಪ್ಲೋಮಾ, ಬಿಎಸ್‌ಸಿ ಮತ್ತು ತತ್ಸಮಾನ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ರೈತರು ಮತ್ತು ಕೃಷಿ ಕಾರ್ಮಿಕರ ಮಕ್ಕಳಿಗೆ ಮೀಸಲು ಪ್ರಮಾಣವನ್ನು ಶೇ.40 ರಿಂದ ಶೇ.50ಕ್ಕೆ ಹೆಚ್ಚಿಸಲು ಸಚಿವ ಸಂಪುಟ ಸಭೆ ತೀರ್ಮಾನಿಸಿದೆ.

ಈ ಹಿಂದೆ ಶೇ.40 ಮೀಸಲು ಇತ್ತು. ಆ ಪ್ರಮಾಣವನ್ನು ಶೇ.50ರಷ್ಟು ಹೆಚ್ಚಿಸಲು ಬಜೆಟ್‌ನಲ್ಲಿ ಘೋಷಿಸಲಾಗಿತ್ತು ಎಂದು ಸಂಪುಟ ಸಭೆಯ ಬಳಿಕ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

2021-22 ನೇ ಸಾಲಿಗೆ ಸರಕಾರಿ ಶಾಲಾ ಮಕ್ಕಳ ಸಮವಸ್ತ್ರ ಖರೀದಿಗೆ 83.62 ಕೋಟಿ ರು. ನೀಡಲು ತೀರ್ಮಾನಿಸಲಾಗಿದ್ದು, ಕೈಮಗ್ಗ ನಿಗಮದಿಂದ ಖರೀದಿಸಲಾಗುವುದು. ಅಲ್ಲದೆ,



ರಾಜ್ಯದ ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ಪುಸ್ತಕ, ಸಮವಸ್ತ್ರ, ಶೂ, ಸಾಕ್ಸ್, ಇತ್ಯಾದಿಗಳ ಖರೀದಿಗೆ 83 ಕೋಟಿ ರು. ಮಂಜೂರು ಮಾಡಲು ತೀರ್ಮಾನ ತೆಗೆದುಕೊಳ್ಳಲಾಯಿತು ಎಂದರು.

ರಾಜ್ಯದ ಹೊಸ ಜಲನೀತಿ ಕರಡು ರೂಪಿಸಿ, ಪ್ರಾಧಿಕಾರ ರಚಿಸುವ ಉದ್ದೇಶದಿಂದ ಸೂಕ್ತ ನಿರ್ಣಯ ತೆಗೆದುಕೊಳ್ಳಲು ಸಂಪುಟ ಉಪಸಮಿತಿ ರಚಿಸಲು ನಿರ್ಧರಿಸಲಾಗಿದೆ.

22-06-2021
Vsv Pg 01

For more information visit
University Library Website
Web - uasbagrilibindia.org
E-mail- librarian@uasbangalore.edu.in

"Don't wait for opportunity. Create it."

UASB LIBRARY
Newspaper Clippings
Pg .2 Tuesday 22-06-2021 Jai Kisan





ಉತ್ತರ ಪ್ರದೇಶದ ಸೋನ್‌ಭದ್ರಾ, ಚಂದೌಲಿ ಹಾಗೂ ಮಧ್ಯಪ್ರದೇಶದ ರಾಜ್‌ಘರ್ ಜಿಲ್ಲೆಗಳನ್ನು ದೇಶದ ಪ್ರಗತಿಹೊಂದಿದ ನಾಲ್ಕು ಪ್ರಮುಖ ಜಿಲ್ಲೆಗಳಾಗಿ ಗುರುತಿಸಲಾಗಿದೆ. ಆದರೆ ಚಂದೌಲಿ ಮಾತ್ರ ವಿಶ್ವದಲ್ಲೂ ಮಾದರಿ ಜಿಲ್ಲೆ ಎಂಬ ಹೆಸರು ಪಡೆದಿದೆ ಕಾರಣ, ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್‌ಗೂ ಇದೇ ಜಿಲ್ಲೆಯ ಕಪ್ಪು ಅಕ್ಕಿ ರಫ್ತಾಗುತ್ತಿದ್ದು, ಜಾಗತಿಕ ಮಾರುಕಟ್ಟೆಯಲ್ಲೂ ಕಪ್ಪು ಅಕ್ಕಿಗೆ ಬೇಡಿಕೆ ತೀವ್ರವಾಗಿದೆ.

ಕಪ್ಪು ಅಕ್ಕಿಗೆ ವಿಶ್ವಮಾನ್ಯತೆ



ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಆರಂಭಿಸಿದ ಜಿಲ್ಲೆಗಳ ಅಭಿವೃದ್ಧಿ ಯೋಜನೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಾಮುಖ್ಯತೆ ಪಡೆದಿದ್ದು, ವಿಶ್ವಸಂಸ್ಥೆ ಅಭಿವೃದ್ಧಿ ಕಾರ್ಯಕ್ರಮವು (ಯುಎನ್‌ಡಿಪಿ) ಭಾರತದ ನಾಲ್ಕು ಪ್ರಮುಖ ಜಿಲ್ಲೆಗಳನ್ನು ಅತ್ಯಂತ ಪ್ರಗತಿಹೊಂದಿದ ಜಿಲ್ಲೆಗಳೆಂದು ಪಟ್ಟಿಮಾಡಿದೆ. ವಿಶೇಷವೆಂದರೆ ಪಟ್ಟಿಯಲ್ಲಿ ಉತ್ತರ ಪ್ರದೇಶದ ಚಂದೌಲಿಯೂ ಸೇರಿದ್ದು, ಈ ಜಿಲ್ಲೆ ಪ್ರಖ್ಯಾತಿ ಹೊಂದಲು ಅಲ್ಲಿನ ಪ್ರಮುಖ ಬೆಳೆ ಕಪ್ಪು ಅಕ್ಕಿ ಕಾರಣವಾಗಿದೆ.

ಹೌದು! ಜಾರ್ಖಂಡ್‌ನ ಸಿಮ್ಡೆಗಾ, ಉತ್ತರ ಪ್ರದೇಶದ ಸೋನ್‌ಭದ್ರಾ, ಚಂದೌಲಿ ಹಾಗೂ ಮಧ್ಯಪ್ರದೇಶದ ರಾಜ್‌ಘರ್ ಜಿಲ್ಲೆಗಳನ್ನು ದೇಶದ ಪ್ರಗತಿಹೊಂದಿದ ನಾಲ್ಕು ಪ್ರಮುಖ ಜಿಲ್ಲೆಗಳಾಗಿ ಗುರುತಿಸಲಾಗಿದೆ. ಆದರೆ ಚಂದೌಲಿ ಮಾತ್ರ ವಿಶ್ವದಲ್ಲೂ ಮಾದರಿ ಜಿಲ್ಲೆ ಎಂಬ ಹೆಸರು ಪಡೆದಿದೆ ಕಾರಣ, ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್‌ಗೂ ಇದೇ ಜಿಲ್ಲೆಯ ಕಪ್ಪು ಅಕ್ಕಿ ರಫ್ತಾಗುತ್ತಿದ್ದು, ಜಾಗತಿಕ ಮಾರುಕಟ್ಟೆಯಲ್ಲೂ ಕಪ್ಪು ಅಕ್ಕಿಗೆ ಬೇಡಿಕೆ ತೀವ್ರವಾಗಿದೆ. ಪ್ರಧಾನಿ ನರೇಂದ್ರ ಮೋದಿ ಹಾಗೂ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ಸರ್ಕಾರದ ಒಂದು ಜಿಲ್ಲೆ ಒಂದು ಉತ್ಪನ್ನ ಯೋಜನೆಗಳ ಅನ್ವಯ 2018ರಲ್ಲಿ ಚಂದೌಲಿಯಲ್ಲಿ ಕಪ್ಪು ಅಕ್ಕಿ ಬೆಳೆಯನ್ನು ಪ್ರಾರಂಭಿಸಲಾಯಿತು. ನಂತರ ಸರ್ಕಾರದ ಆದೇಶದಂತೆ ನೆರೆ ಜಿಲ್ಲೆಯಾಗಿರುವ ಮಿರ್ಜಾಪುರದಲ್ಲಿ ಅಕ್ಕಿ ಮಾರಾಟ ಮಾಡಲಾಗಿದ್ದು, ಇಂದು ಉತ್ತರ ಪ್ರದೇಶದ ಬಹು ಜಿಲ್ಲೆಗಳಲ್ಲಿ ಕಪ್ಪು ಅಕ್ಕಿ ಬೆಳೆಯಲಾಗುತ್ತಿದೆ. ಅಲ್ಲದೇ, 2020-25ರ ರ ರಫ್ತು ನೀತಿ ಅನ್ವಯವೂ ಈ ಬೆಳೆಯನ್ನು ಉತ್ತೇಜಿಸಲಾಗಿದ್ದು, ಜಾಗತಿಕ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಿರುವ ಹಿನ್ನೆಲೆ ಚಂದೌಲಿ ಅಭಿವೃದ್ಧಿಯೂ ಹೆಚ್ಚುತ್ತಿದ್ದು, ವಿಶ್ವಾದ್ಯಂತ ಪ್ರಖ್ಯಾತಿ ಪಡೆಯಲು ಕಾರಣವಾಗಿದೆ.ಸರ್ಕಾರದ ಈ ಯೋಜನೆಗಳು ರೈತರ ಆದಾಯ ಹೆಚ್ಚಿಸುವ ಹಾಗೂ ಕೃಷಿ ಹಾಗೂ ಇನ್ನಿತರೆ ಕ್ಷೇತ್ರಗಳ ರಫ್ತನ್ನು ದ್ವಿಗುಣಗೊಳಿಸುವ ಗುರಿ ಹೊಂದಿದೆ ಎನ್ನಲಾಗಿದೆ.



750 ರಿಂದ **800**
ಚಂದೌಲಿಯಲ್ಲಿ ಪ್ರಸಕ್ತ ಕಪ್ಪು ಅಕ್ಕಿ ಬೆಳೆಯುತ್ತಿರುವವರ ಸಂಖ್ಯೆ

80-85
1 ಕೆಜಿ ಕಪ್ಪು ಅಕ್ಕಿ ಬೆಲೆ

200-250
ಸಂಸ್ಕರಿಸಿದ ಒಂದು ಕೆಜಿ ಕಪ್ಪು ಅಕ್ಕಿ ಮಾರಾಟದ ಬೆಲೆ

15-20
2018ರಲ್ಲಿ ಚಂದೌಲಿಯಲ್ಲಿ ಕಪ್ಪು ಅಕ್ಕಿ ಬೆಳೆಯುತ್ತಿದ್ದವರು

ಏನಿದು ಕಪ್ಪು ಅಕ್ಕಿ?

ಕಪ್ಪು ಅಕ್ಕಿಯು ಮೂಲತಃ ಪ್ರಾಚೀನ ಚೀನಾದ ಬೆಳೆಯಾಗಿದ್ದು, ಶ್ರೀಮಂತರ ಸೇವನೆಗಷ್ಟೇ ಇರುವ ಅಕ್ಕಿಯ ಪ್ರಭೇದ ಎಂದು ನಂಬಲಾಗಿತ್ತು. ಆದರೆ ಭಾರತದ ಮಣಿಪುರದಲ್ಲಿ ಶತಮಾನಗಳಿಂದಲೂ ಈ ಬೆಳೆ ಅಸ್ತಿತ್ವದಲ್ಲಿದ್ದು, ಕಳೆದ ಕೆಲ ವರ್ಷಗಳ ಹಿಂದಷ್ಟೇ ಇದರ ರಫ್ತು ಪ್ರಕ್ರಿಯೆ ಆರಂಭಗೊಂಡಿದೆ ಅದಕ್ಕೂ ಮುನ್ನ ಸ್ಥಳೀಯ ಬೆಳೆಯೆಂದು ಪರಿಗಣಿಸಿ ಸೇವನೆಗೆ ಮಾತ್ರ ಬಳಸಲಾಗುತ್ತಿತ್ತು.ಹಲವಾರು ಆರೋಗ್ಯ ಪ್ರಯೋಜನಗಳಿರುವುದರಿಂದ ಬೇಡಿಕೆ ಹೆಚ್ಚಿದ್ದು, ಈಗ ಬೆಳೆಯನ್ನು ದೇಶಾದ್ಯಂತ ರೈತರು ಬೆಳೆಯಲು ಆರಂಭಿಸಿದ್ದಾರೆ.



ಮಾರುಕಟ್ಟೆ ಪರಿಸ್ಥಿತಿ ಹೀಗಿದೆ..

ಆರೋಗ್ಯಕ್ಕೆ ಉತ್ತಮವಾಗಿರುವ ಹಿನ್ನೆಲೆ ಗ್ರಾಹಕರಿಂದ ಬೇಡಿಕೆಯೂ ಹೆಚ್ಚಿದ್ದು, ಅಮೆರಿಕ, ನ್ಯೂಜಿಲ್ಯಾಂಡ್, ಆಸ್ಟ್ರೇಲಿಯಾ, ಬ್ರಿಟನ್ ಮುಂತಾದ ದೇಶಗಳಲ್ಲಿ ಈ ಅಕ್ಕಿಗೆ ಬೇಡಿಕೆ ಉತ್ತಮವಾಗಿದೆ. ಇದರಿಂದಾಗಿ ರೈತರಿಗೂ ಆದಾಯದಲ್ಲಿ ಹೆಚ್ಚಳವಾಗುತ್ತಿದ್ದು, ಕಪ್ಪು ಅಕ್ಕಿ ಕೆಜಿಗೆ 80 ರಿಂದ 85 ರೂ.ಗಳಾಗಿದೆ. ಇದು ಗ್ರೇಡ್ ಎ ಭತ್ತದ ಬೆಂಬಲ ಬೆಲೆ 19.6 ರೂ.ಗಳಿಗಿಂತ ಶೇ.4 ಪಟ್ಟು ಹೆಚ್ಚಳ ಎನ್ನಲಾಗಿದೆ. ಜತೆಗೆ ಸಂಸ್ಕರಿಸಿದ ಕಪ್ಪು ಅಕ್ಕಿಯ ಬೆಲೆ ಕೆಜಿ ಗೆ 160 ರೂ.ಗಳಾಗಿದ್ದು, ಇದನ್ನು 200-250 ರೂ.ಗಳಿಗೆ ಮಾರಾಟ ಮಾಡಲಾಗುತ್ತಿದೆ.

ಏನೆಲ್ಲ ಪ್ರಯೋಜನ?



ಕಪ್ಪು ಅಕ್ಕಿಯಲ್ಲಿ ಆಂಥೋಸಯಾನಿನ್ಸ್ ಎಂಬ ಅಂಶವಿದ್ದು, ಇದು ಅಕ್ಕಿ ಕಪ್ಪು ಬಣ್ಣವಾಗಿರುವುದಕ್ಕೆ ಕಾರಣವಾಗಿದೆ. ಇದರಿಂದಾಗಿ ಅಕ್ಕಿ, ಉರಿಯೂತ, ಕ್ಯಾನ್ಸರ್‌ನಂತರ ಸಮಸ್ಯೆಗಳನ್ನು ನಿಗ್ರಹಿಸುವಲ್ಲಿ ಪರಿಣಾಮಕಾರಿಯಾಗಿದ್ದು, ಕಣ್ಣಿನ ಆರೋಗ್ಯ ಸುಧಾರಣೆಗೂ ಸಹಕಾರಿಯಾಗಿದೆ. ಇದಲ್ಲದೇ, ಪ್ರೋಟೀನ್, ಕಬ್ಬಿಣಾಂಶ, ವಿಟಮಿನ್-ಇ, ಕ್ಯಾಲ್ಸಿಯಂ, ಮೆಗ್ನೇಷಿಯಂ, ನ್ಯಾಚುರಲ್ ಫೈಬರ್ ಹೊಂದಿದ್ದು ರಕ್ತದೊತ್ತಡ, ಮಧುಮೇಹ ಮುಂತಾದ ಕಾಯಿಲೆ ತಡೆಗಟ್ಟಲು ಇದರ ಸೇವನೆ ಸಹಕಾರಿ. ಜತೆಗೆ ತೂಕನಷ್ಟವನ್ನು ಈ ಅಕ್ಕಿ ಉತ್ತೇಜಿಸುತ್ತದೆ.

22-06-2021 Hd Pg 04